ಕೊಬ್ಬರಿ ಮಿಠಾಯಿ ಮಾಡಿಸಿದರು. ಅಳಿಯನಿಗೆ ಬೇಸನ್‌ಲಾಡು ಇಷ್ಟವೆಂದು ನೆನಪಾಗಿ ಅದನ್ನೂ ಮಾಡಿಸಿದರು. ಜೊತೆಗೆ ಮನೆಯಲ್ಲಿ ಬೆಳೆದಿದ್ದ ತರಕಾರಿ, ಬಾಳೆಹಣ್ಣು, ತೆಂಗಿನಕಾಯಿಗಳನ್ನು ತೆಗೆದಿಟ್ಟುಕೊಂಡರು.

ಗುರುವಾರ ಬಂದಿತು. ರಘೋತ್ತಮ್ ಕಾರು ಡ್ರೈವ್ ಮಾಡುತ್ತಿರಲಿಲ್ಲ. ಆದ್ದರಿಂದ ಡ್ರೈವರ್ ಭಾಸ್ಕರನಿಗೆ ಹೇಳಿದರು. ಅವನು 10.30ಕ್ಕೆ ಬಂದ. ಅಷ್ಟರಲ್ಲಿ ಮೂವರೂ ಊಟ ಮುಗಿಸಿದರು. ಹಿಂದಿನ ದಿನವೇ ಪುಷ್ಪ ಪದ್ಮಮ್ಮನವರಿಗೆ ಫೋನ್ ಮಾಡಿ ತಾವು ಊಟಮಾಡಿಕೊಂಡು ಬರುವುದಾಗಿ ಹೇಳಿದ್ದರು.

ಎಲ್ಲಾ ಸಿದ್ಧಮಾಡಿಕೊಂಡು ಅವರು ಹೊರಡುವ ವೇಳೆಗೆ 11 ಗಂಟೆಯಾಯಿತು. 12 ಗಂಟೆಗೆಲ್ಲಾ ಅವರು ಬೀಗರ ಮನೆಯಲ್ಲಿದ್ದರು. ಪದ್ಮಮ್ಮನೂ ಊಟಮುಗಿಸಿ ಗಂಡನ ಜೊತೆ ಮಾತನಾಡುತ್ತಾ ಕುಳಿತಿದ್ದರು. ಅಜಯ್ ಕೆಲಸಕ್ಕೆ ಹೋಗಿದ್ದ. ಪುಷ್ಪ ತಂದಿದ್ದ ತಿಂಡಿ, ತರಕಾರಿ, ತೆಂಗಿನಕಾಯಿ, ಹಣ್ಣುಗಳನ್ನು ನೋಡಿ ಪದ್ಮ ಹುಸಿಮುನಿಸಿನಿಂದ ಕೇಳಿದರು. ‘ನಮ್ಮನೇಲಿ ಊಟಮಾಡಕ್ಕೆ ಮೀನಮೇಷ ನೋಡ್ತೀರಿ. ನೀವು ಇದನ್ನೆಲ್ಲಾ ತರೋದು ನ್ಯಾಯಾನ?’

‘ನಿಮ್ಮನೇಲಿ ಊಟಮಾಡದೆ ಯಾವತ್ತು ವಾಪಸ್ಸು ಹೋಗಿದ್ದೀವಿ? ಹೋದ ಸಲ ಹಬ್ಬದಡಿಗೇನೇ ಮಾಡಿದ್ರಲ್ಲಾ?’

ಬಕುಳಾ ತನ್ನ ರೂಂ ಸೇರಿದಳು. ಅತ್ತೆ ಶಾಂತವಾಗಿದ್ದಾರೆ. ಯಾವಾಗ ಬಾಂಬ್ ಸಿಡಿಸುತ್ತಾರೋ ಏನೋ? ಅಜಯ್ ಕೂಡ ಇದ್ದಿದ್ರೆ ಚೆನ್ನಾಗಿರ್ತಿತ್ತು ಎಂದುಕೊಂಡಳು.

ಒಂದೂವರೆಯ ಹೊತ್ತಿಗೆ ಪದ್ಮ ಕಾಫಿಕೊಟ್ಟು ಹೇಳಿದರು. ‘ಕಾಫಿ ಕುಡಿದು ಮುಂದಿನ ರೂಂನಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ಅಜಯ್ ಐದು ಗಂಟೆಗೆಲ್ಲಾ ಬರ್ತೀನೀಂತ ಹೇಳಿದ್ದಾನೆ. ಆಮೇಲೆ ಮಾತಾಡೋಣ’.

ಪುಷ್ಪ ಗೆಸ್ಟ್‌ರೂಂ ಸೇರಿ ಹಾಸಿಗೆಯ ಮೇಲೆ ಉರುಳಿದರು. ಆದರೆ ನಿದ್ರೆ ಹತ್ತಿರ ಸುಳಿಯಲಿಲ್ಲ. ಒಂದು ರೀತಿಯ ಆತಂಕ, ಅಪರಾಧಿ ಮನೋಭಾವ ಅವರನ್ನು ಕಾಡಿತು. ತಾವು ಮಗಳನ್ನು ಸರಿಯಾಗಿ ಬೆಳೆಸಲಿಲ್ಲವೇನೋ? ಈ ಹುಡುಗಿ ಏನೋ ತಪ್ಪು ಮಾಡಿರಬೇಕು. ಅದಕ್ಕೆ ಪದ್ಮಮ್ಮ ಹೇಳಿಕಳುಹಿಸಿದ್ದಾರೆ. ಮಗ ಬಂದಮೇಲೆ ಏನು ರಂಪ ಮಾಡ್ತಾರೋ ಏನೋ? ನಾನಾತರಹದ ಯೋಚನೆಗಳು ಅವರನ್ನು ಕಾಡಿದವು.

ಅಜಯ್ ಐದುಗಂಟೆಗೆ ಬಂದವನು ಅತ್ತೆ–ಮಾವನಿಗೆ ಹಾಯ್ ಹೇಳಿ ರೂಮು ಸೇರಿ ಅರ್ಧಗಂಟೆಯ ನಂತರ ಫ್ರೆಷ್ ಆಗಿ ಹೊರಗೆ ಬಂದ. ಬಕುಳಾ ಅವನ ಹಿಂದೇ ಬಂದಳು.

‘ಬಕುಳಾ, ಎಲ್ಲರಿಗೂ ತಿಂಡಿಕೊಡಮ್ಮ’ ಎಂದರು ಪದ್ಮಮ್ಮ.

ಬಿಸಿಬಿಸಿ ಉಪ್ಪಿಟ್ಟು, ಸಜ್ಜಿಗೆಯ ಜೊತೆ ಪುಷ್ಪ ತಂದಿದ್ದ ತಿಂಡಿಗಳೂ ಇದ್ದವು. ಅಜಯ್ ಇಷ್ಟಪಟ್ಟು ತಟ್ಟೆ ಖಾಲಿಮಾಡಿದ. ಪದ್ಮಮ್ಮ ಎಲ್ಲರಿಗೂ ಕಾಫಿತಂದುಕೊಟ್ಟು ಹೇಳಿದರು.



‘ನಾನು ಈಗ ಒಂದು ಮುಖ್ಯವಾದ ವಿಷಯ ಹೇಳ್ತೀನಿ. ಎಲ್ಲರೂ ತಾಳ್ಮೆಯಿಂದ ಕೇಳಬೇಕು.’

‘ಹೇಳಮ್ಮ’ ಎಂದ ಅಜಯ್.

‘ಪುಷ್ಪ, ಬಕುಳಾ ನಿಮ್ಮ ಒಬ್ಬಳೇ ಮಗಳು. ನಿಮಗೆ ಆಗಾಗ್ಗೆ ಅವಳನ್ನು ನೋಡಬೇಕು. ಅವಳ ಜೊತೆ ಇರಬೇಕು ಅನ್ನಿಸೋದು ಸಹಜ’.

‘ಹಾಗೇನಿಲ್ಲ...’

‘ತಾಯಿ ಹೃದಯ ಹೇಗಿರತ್ತೇಂತ ನನಗೆ ಗೊತ್ತಿಲ್ವೇ? ನಮ್ಮನೆ ಮಹಡಿ ಮನೆ ಖಾಲಿಯಾಗ್ತಾಯಿದೆ’.

‘ಅಯ್ಯೋ, ನಾವು ಹಳ್ಳಿ ಬಿಟ್ಟು ಬರಕ್ಕಾಗಲ್ಲ. ನಾವು ಬಂದರೆ ಜಮೀನು ಯಾರು ಮಾಡಿಸ್ತಾರೆ?’

‘ನಿಮ್ಮನ್ನು ಬನ್ನೀಂತ ನಾನೆಲ್ಲಿ ಕರೆಯುತ್ತಿದ್ದೀನಿ?’

‘ಮತ್ತೆ?’

‘ನಾನು ನೇರವಾಗಿ ಮಾತಾಡ್ತೀನಿ ಕೇಳಿ. ಈಗಿನವರಿಗೆ ನಮ್ಮ ಜೊತೆ ಅಡ್ಜಸ್ಟ್ ಆಗೋದು ಕಷ್ಟ. ನಮಗೆ ಬೇಗ ಎದ್ದು ಅಭ್ಯಾಸ. ಅವರಿಗೆ ತಡವಾಗಿ ಎದ್ದು ಅಭ್ಯಾಸ. ನಮಗೆ ಬೆಳಗಾಗುತ್ತಿರುವ ಹಾಗೆ ಉಪ್ಪಿಟ್ಟು, ರೊಟ್ಟಿ, ದೋಸೆ, ಇಡ್ಲಿ ಮಾಡುವ ಸಂಭ್ರಮ. ನಮ್ಮ ಕೆಲಸ ನಿಧಾನ. ಬೇಗ ಏಳಲೇಬೇಕು. ಈಗೀನವರು 8 ಗಂಟೆಗೆ ಎದ್ದು ರೆಡಿಯಾಗಿ ಕಾರ್ನ್‌ಫ್ಲೇಕ್ಸ್ ತಿಂದು ರಾತ್ರಿ ಮಾಡಿದ್ದ ಚಪಾತಿ, ಪಲ್ಯ ಡಬ್ಬಿಗೆ ಹಾಕ್ಕೊಂಡು ಹೋಗ್ತಾರೆ ಇಲ್ಲ ಅಲ್ಲೇ ಫುಡ್‌ಕೋರ್ಟ್‌ನಲ್ಲಿ ತಿಂತಾರೆ. ಸಾಯಂಕಾಲ ಒಂದು ರೌಂಡ್ ಹೋಗಿ ಏನೇನೋ ತಿಂದು ಬರ್ತಾರೆ. ಭಾನುವಾರ ಅವರಿಗೆ ಬೆಳಗಾಗೋದೇ 11 ಗಂಟೆಗೆ. ಹೊರಗೆ ಹೋದರೆ ಬರೋದೇ ಮಧ್ಯರಾತ್ರಿಗೆ’.

‘ಇದೆಲ್ಲಾ ಯಾಕೆ ಹೇಳ್ತಿದ್ದಾರೆ?’ ಎನ್ನಿಸಿತು ಪುಷ್ಪಾಗೆ. ಆದರೆ ಮಾತನಾಡಲಿಲ್ಲ.

‘ನೋಡಿ ಒಟ್ಟಿಗೆ ಇದ್ದು ಭಿನ್ನಾಭಿಪ್ರಾಯಗಳ ನಡುವೆ ಮುಖ ಗಂಟುಹಾಕಿಕೊಂಡು ಬದುಕುವುದಕ್ಕಿಂತ ಬೇರೆ ಬೇರೆ ಇರುವುದು ಒಳ್ಳೆಯದಲ್ವಾ? ಅದಕ್ಕೆ ಮಗ, ಸೊಸೆ ಮೇಲಿನ ಮನೆಯಲ್ಲಿರಲೀಂತ ನನ್ನ ಹಾಗೂ ನಮ್ಮ ಯಜಮಾನರ ಅಭಿಪ್ರಾಯ. ನೀವೂ ಇದಕ್ಕೆ ಒಪ್ಪೀರಾಂತ ಭಾವಿಸಿದ್ದೀನಿ’.

ಪುಷ್ಪಾಗೆ ಶಾಕ್ ಆಯ್ತು. ‘ಹೀಗೂ ಉಂಟೆ?’

‘ನಿಮ್ಮ ಮಗಳೂ ಒಳ್ಳೆಯವಳೇ. ಅವಳಿಗೂ ತನ್ನ ಗಂಡನಿಗೆ ಏನೇನೋ ಮಾಡಿ ಬಡಿಸಬೇಕೂಂತ ಆಸೆ ಇರತ್ತೆ. ತನ್ನ ಮನೆ ಹಾಗಿಟ್ಟುಕೊಳ್ಳಬೇಕು, ಹೀಗಿಟ್ಟುಕೊಳ್ಳಬೇಕು ಎನ್ನುವ ಕನಸುಗಳಿರತ್ತೆ. ನೀವೂ ಬಂದು ನಿರಾಳವಾಗಿ ನಾಲ್ಕು ದಿನ ಮಗಳ ಮನೆಯಲ್ಲಿರಬಹುದು’.

‘ಈಗ ಯಾಕೆ ಬೇರೆ ಮನೆ ವಿಚಾರ?’ ಪುಷ್ಪ ಕೇಳಿದರು.

‘ಯಾಕೆ ಯೋಚನೆ ಮಾಡ್ತೀರಾ? ಸ್ವತಂತ್ರವಾಗಿದ್ದರೆ ನಿಮ್ಮ ಮಗಳಿಗೆ ಜವಾಬ್ದಾರಿ ಬರತ್ತೆ. ನಮ್ಮ ಮನೆ ಅನ್ನುವ ಅಭಿಮಾನ ಬೆಳೆಯುತ್ತೆ. ನೀವು ಮುಂದಿನವಾರ ಬಂದು ಮನೆ ಅರೇಂಜ್ ಮಾಡಿಕೊಡಿ. ನಮ್ಮ ಕೆಲಸದವಳ ನಾದಿನೀನೇ ಮನೆಕೆಲಸ ಮಾಡಿಕೊಳ್ತಾಳೆ’.

‘ಇದೆಲ್ಲಾ ಯಾಕೆ ಬೇಕಮ್ಮಾ?’ ರಘೋತ್ತಮ್ ಕೇಳಿದರು.

‘ಭಿನ್ನಾಭಿಪ್ರಾಯ ಬಂದಾಗ ನಾವು ಅವರ ಪಾಲಿಗೆ ತೊಡಕು ಅನ್ನಿಸಿಬಿಡುತ್ತೇವೆ. ಅವರಿಗೂ ಹಾಗೇ ಅನ್ನಿಸಬಹುದು. ಕೊನೆಯವರೆಗೂ ನಾವು ಚೆನ್ನಾಗಿರಬೇಕಾದರೆ ಇದೇ ಒಳ್ಳೆಯದು’ ಶೇಷಗಿರಿ ಹೇಳಿದರು.

‘ಅಮ್ಮ ಮೇಲಿದ್ರೇನು? ಕೆಳಗಿದ್ರೇನು. ನನಗೇನೂ ವ್ಯತ್ಯಾಸ ಕಾಣ್ತಿಲ್ಲ. ಒಂದು ವಿಷಯ ಸ್ಪಷ್ಟವಾಗಿ ಹೇಳು’.

‘ಏನಪ್ಪಾ ಅದು?’

‘ನಾವು ಮೇಲಿನ ಮನೆಗೆ ಹೋದರೆ ನೀನು ನಮಗೆ ಊಟ ತಿಂಡಿ ಏನೂ ಕೊಡಲ್ವಾ?’

‘ಕೊಡದೇ ಇರ್ತೀನೇನೋ? ಏನು ಸ್ಪೆಷಲ್ ಮಾಡಿದರೂ ಕೊಟ್ಟೇ ಕೊಡ್ತೀನಿ’.

‘ಹಾಗಾದರೆ ನಾನು ಮೇಲಿನ ಮನೆಗೆ ಹೋಗಲು ಸಿದ್ಧ’.

‘ಆದರೆ ನಾನು ಸಿದ್ಧಳಿಲ್ಲ’ ಎಂದಳು ಬಕುಳಾ. ಅವಳ ಅಮ್ಮ–ಅಪ್ಪ ಆಶ್ಚರ್ಯದಿಂದ ಅವಳತ್ತ ನೋಡಿದರು.

‘ಯಾಕೆ ಸಿದ್ಧವಿಲ್ಲ?’ ಅಜಯ್ ಕೇಳಿದ.

‘ನನಗೆ ಚೆನ್ನಾಗಿ ಅಡುಗೆ ತಿಂಡಿ ಮಾಡಕ್ಕೆ ಬರಲ್ಲ. ನೀವು ಮಗನಿಗೆ ರುಚಿರುಚಿಯಾಗಿ ಅಡಿಗೆ, ತಿಂಡಿ ಕೊಟ್ರೆ ನನ್ನ ಗತಿಯೇನು?’ ಬಕುಳ ಮುಖ ಊದಿಸಿಕೊಂಡು ಹೇಳಿದಳು.

‘ನಿನ್ನ ಜೊತೆ ಬಂದರೆ ನಾನವನಿಗೆ ಕೊಡೋದು. ನೀವೇನು ಜಗಳವಾಡಿಕೊಂಡು ಬೇರೆ ಹೋಗ್ತಿದ್ದೀರಾ? ಬೇರೆ ಬೇರೆ ಇರೋದು ಇಬ್ಬರಿಗೂ ಒಳ್ಳೆಯದು. ನಮ್ಮನೆ ಸೊಸೆ ನೀನು. ಹಬ್ಬಹರಿದಿನಗಳಲ್ಲಿ ನೀನು ಬರಲೇಬೇಕು. ನಮ್ಮ ಕಷ್ಟಸುಖಕ್ಕೆ ನೀವಾಗಲೇ ಬೇಕು. ನಾಳೆ ನಿನಗೆ ಮಗನೋ ಮಗಳೋ ಹುಟ್ಟಿದರೆ ನಾನು ತಾನೇ ನೋಡಿಕೊಳ್ಳಬೇಕು?’

ಬಕುಳಾಗೆ ತಾನು ತಾಯಿಯ ಎದುರು ಆಡಿದ ಮಾತುಗಳು ನೆನಪಾಗಿ ನಾಚಿಕೆಯಾಯಿತು. ಅತ್ತೆಯ ಉದಾತ್ತ ವ್ಯಕ್ತಿತ್ವದ ಎದುರು ತಾನು ಕುಬ್ಜಳಾದಂತೆ ಅವಳಿಗೆ ತೋರಿತು. ಅವಳ ಕಣ್ಣಿಂದ ಜಾರಿದ ಹನಿಗಳನ್ನು ಯಾರೂ ಗಮನಿಸಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**